# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ
ನಂ-29, ವಿಜಯನಗರ 2ನೇ
ಹಂತ, ಹಿನಕಲ್, ಮೈಸೂರು-
570007
ವೆಬ್ ಸೈಟ್ : www.cescmysore.org .

ಕಾರ್ಯ ನಿರ್ವಾಹಕ ಇಂಜಿನಿಯರ್(ವಿ),ರವರ ಕಛೇರಿ
ಕಾ ಮತ್ತು ಪಾ.ವಿಭಾಗ ,ಸೆಸ್ಕ್, ಮಡಿಕೇರಿ
ದೂರವಾಣಿ :08272-224701,225650
ಈ-ಮೇಲ್ :cesceemdk@gmail.com

(50)

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2018-19/5033-5039 ದಿನಾಂಕ :-16-01-19.

## ಸಭೆಯ ನಡಾವಳಿಗಳು

ದಿನಾಂಕ 10.01.2019 ರಂದು ವಿರಾಜಪೇಟೆ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ.ಬಿ.ಸೋಮಶೇಖರ್ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ.
2. ಶ್ರೀ.ಪಿ.ಎಸ್.ದೇವಯ್ಯ : ಸಹಾಯಕ ಕರ್ಯನಿರ್ವಾಹಕ ಇಂಜಿನಿಯರ್(ತಾಂ), ಮಡಿಕೇರಿ.
3. ಶ್ರೀ.ಪಿ.ಎಸ್.ಸುರೇಶ್ : ಸಹಾಯಕ ಕರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ
4. ಶ್ರೀ.ಶಿವನಗೌಡ ಅಯ್ಯನಗೌಡ ಪಾಟೀಲ : ಸಹಾಯಕ ಇಂಜಿನಿಯರ್(ವಿ), ವಿರಾಜಪೇಟೆ
5. ಶ್ರೀ.ಕೆ.ಎಂ.ದಿಲೀಪ್ : ಸಹಾಯಕರು ಇಂಜಿನಿಯರ್(ತಾಂ), ವಿರಾಜಪೇಟೆ ಉಪವಿಭಾಗ.
6. ಶ್ರೀ.ಹೆಚ್.ಎಸ್.ರಮೇಶ್ : ಕಿರಿಯ ಇಂಜಿನಿಯರ್(ತಾಂ), ಅಮ್ಮತ್ತಿ ಶಾಖೆ.
7. ಶ್ರೀಮತಿ.ಬಿ.ಜಿ.ಚಂಪಾವತಿ : ಕಿರಿಯ ಇಂಜಿನಿಯರ್(ತಾಂ), ಸಿದ್ದಾಪುರ ಶಾಖೆ.
8. ಶ್ರೀ.ಸಿ.ಬಿ.ದೇವಯ್ಯ : ಕಿರಿಯ ಇಂಜಿನಿಯರ್(ತಾಂ), ಪಾಲಿಬೆಟ್ಟ ಶಾಖೆ.
9. ಶ್ರೀ.ಭರತ್‌ಕುಮಾರ್ : ಮೆ:ಐಡಿಯಾ ಇನ್ಫಿನಿಟಿ ಐಟಿ ಸಲ್ಯುಸನ್, ಬೆಂಗಳೂರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ರವರಾದ ಶ್ರೀ.ಬಿ.ಸೋಮಶೇಖರ್ ರವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಂಡರು. ದಿನಾಂಕ:11.10.2018 ರಂದು ನಡೆದ ಸಭೆಯ ನಡಾವಳಿಗಳ ಬಗ್ಗೆ ಹಾಗು ಸಾಧಿಸಿದ ಪ್ರಗತಿ ಬಗ್ಗೆ ಚರ್ಚಿಸಿ ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ ಈ ಕೆಳಕಂಡಂತೆ ಸಲಹೆ ಸೂಚನೆಗಳನ್ನು ನೀಡಿದರು.

AEE/JE 30/3/19

| ಕ್ರ.ಸಂ | ಸಲಹೆ/ದೂರುಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಸಲಹೆ/ ದೂರುಗಳಿಗೆ ಉತ್ತರ |
|---|---|---|---|
| 1 | ಶ್ರೀ.ಚೇಕು ಕಲ್ಲುಬಾಣೆ ದೂ: | * ಹಾಲುಗುಂದ ಗ್ರಾಮದಲ್ಲಿ ತೀವ್ರ ವಿದ್ಯುತ್ ಅಡಚಣೆಯಾಗುತ್ತಿದ್ದು ಶೀಘ್ರವೇ ಸರಿಪಡಿಸುವಂತೆ ಕೋರಿದರು.<br><br>* ಕಲ್ಲುಬಾಣೆ ಗ್ರಾಮದ ಗದ್ದೆಯಲ್ಲಿ ವಿದ್ಯುತ್ ತಂತಿಯ ತೀವ್ರ ಕೆಳಮಟ್ಟದಲ್ಲಿದ್ದು ಕೂಡಲೇ ಸರಿಪಡಿಸುವಂತೆ ತಿಳಿಸಿದರು. | * ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡುತ್ತ ಪ್ರಸಕ್ತ ಹಾಲುಗುಂದ ಗ್ರಾಮಕ್ಕೆ ಮಗ್ಗುಲ ಉಪಕೇಂದ್ರದಿಂದ ಹೊರಹೊಮ್ಮುವ ಹೆಚ್.ಟಿ ಅಮ್ಮತ್ತಿ ಮಾರ್ಗದಿಂದ ವಿದ್ಯುತ್ ಸರಬರಾಜಾಗುತ್ತಿದ್ದು ಸದರಿ ಮಾರ್ಗವು ಮಗ್ಗುಲದಿಂದ ಹಾಲುಗುಂದದವರಗೆ ಚೆಂಬೆಬೆಳ್ಳೂ, ಕಣ್ಣಂಗಾಲ ಗ್ರಾಮದ ಮುಖಾಂತರ ಹಾದುಹೋಗಿದ್ದು ಅತೀ ದೊಡ್ಡ ಮಾರ್ಗವಾಗಿದ್ದು, ಮಾರ್ಗ ವಿಭಜನೆಗೆ ಸಲ್ಲಿಸಿದ್ದ ಪ್ರಸ್ತಾವನೆಯು ಮಂಜೂರುಗೊಂಡಿದ್ದು ಸದರೀ ಕಾಮಗಾರಿಯನ್ನು ಕೂಡಲೇ ಕೈಗೆತ್ತಿಕೊಳ್ಳುವುದಾಗಿ ತಿಳಿಸುತ್ತ ಕಾಮಗಾರಿ ಪೂರ್ಣಗೊಂಡ ನಂತರ ಸದರೀ ಗ್ರಾಮದ ವಿದ್ಯುತ್ ಅಡಚಣೆಯು ಕಡಿಮೆಯಾಗುವುದಾಗಿ ತಿಳಿಸಿದರು.<br><br>* ಇದಕ್ಕೆ ಉತ್ತರಿಸಿದ ಕಾರ್ಯ ನಿರ್ವಾಹಕ ಅಭಿಯಂತರರು ಕೂಡಲೇ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ವಿರಾಜಪೇಟೆ ಶಾಖಾಧಿಕಾರಿಯವರಿಗೆ ಸೂಚಿಸಿದರು. |

ಸಂ. 5268
ತಾ. 28-3-19

| | | | |
|---|---|---|---|
| 2 | ಶ್ರೀಮತಿ.ಗಾಯತ್ರಿ ನರಸಿಂಹ, ಶಿವಕೇರಿ, ವಿರಾಜಪೇಟೆ. ದೂ.944842371 | * ವಿರಾಜಪೇಟೆ ಪಟ್ಟಣದ ಶಿವಕೇರಿ ವ್ಯಾಪ್ತಿಯಲ್ಲಿ ವೋಲ್ಟೇಜ್ ಸಮಸ್ಯೆಯಿದ್ದು ಸರಿಪಡಿಸುವಂತೆ ತಿಳಿಸಿದರು.<br><br>* ಅಮ್ಮತ್ತಿ ಶಾಖಾ ವ್ಯಾಪ್ತಿಯ ದೇವರಕಾಡು ಗ್ರಾಮದಲ್ಲಿ ಬೀದಿದೀಪ ಅಳವಡಿಸುವಂತೆ ತಿಳಿಸಿದರು. | * ಇದಕ್ಕೆ ಉತ್ತರಿಸಿದ [illegible] ರವರು ಮಾತನಾಡುತ್ತ ಸದರಿ ಪ್ರದೇಶದಲ್ಲಿ ಹೆಚ್ಚುವರಿ ವಿದ್ಯುತ್ ಪರಿವರ್ತಕವನ್ನು ಅಳವಡಿಸಲು ಸೂಕ್ತ ಜಾಗದ ವ್ಯವಸ್ಥೆ ಇಲ್ಲದ ಕಾರಣ ತೊಂದರೆಯಾಗಿದ್ದು, ಸೂಕ್ತ ಜಾಗ ಸೂಚಿಸಿದಲ್ಲಿ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿ ವೋಲ್ಟೇಜ್ ಸಮಸ್ಯೆ ಪರಿಹರಿಸಲಾಗುವುದೆಂದು ತಿಳಿಸಿದರು.<br><br>* ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡುತ್ತ ಸದರಿ ಬೀದಿದೀಪ ಅಳವಡಿಸುವ ಕಾರ್ಯಕ್ಕೆ ಸಂಭಂಧಪಟ್ಟ ಗ್ರಾಮ ಪಂಚಾಯಿತಿ ಕಾರ್ಯಾಲಯದಿಂದ ನಿಗಧಿತ ಅರ್ಜಿ ಸಲ್ಲಿಸುವಂತೆ ತಿಳಿಸಿದರು. |
| 3 | ಗ್ರಾಮಸ್ಥರು, ಕೊಟ್ಟೋಳಿ ಹಾಗು ಗುಂಡಿಗೆರೆ ದೂ.9686413723 | * ಕೊಟ್ಟೋಳಿ ಹಾಗು ಗುಂಡಿಗೆರೆ ವ್ಯಾಪ್ತಿಯಲ್ಲಿ ವೋಲ್ಟೇಜ್ ಸಮಸ್ಯೆಯಿರುವುದಾಗಿ ಲಿಖಿತ ರೂಪದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. | * ಸದರಿ ಅರ್ಜಿಗೆ ಸಂಭಂಧಿಸಿದಂತೆ ಸಹಾಯ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ದೀನ್ ದಯಾಳ್ ಉಪಧ್ಯಾಯ ಗ್ರಾಮ ವಿದ್ಯುತ್ ಯೋಜನೆಯಡಿಯಲ್ಲಿ ಒಳಗೊಂಡಿದ್ದು ಸದರೀ ಕಾಮಗಾರಿ ಅತಿ ಶೀಘ್ರದಲ್ಲಿ ಪ್ರತ್ಯೇಕ ಪರಿವರ್ತಕ ಅಳವಡಿಸಲಾಗುವುದು ಎಂದು ತಿಳಿಸಿದರು. |

ತಮ್ಮ ವಿಶ್ವಾಸಿ,

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನೆ ವಿಭಾಗ,
ಚಾ.ವಿ.ಸ.ನಿ.ನಿ., ಮಡಿಕೇರಿ

ಪ್ರತಿಯನ್ನು

1. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಚಾ.ವಿ.ಸ.ನಿ.ನಿ.,ಮೈಸೂರು ರವರ ಅವಗಹನೆಗಾಗಿ ಸಲ್ಲಿಸಲಾಗಿದೆ
2. ಪ್ರಧಾನ ವ್ಯವಸ್ಥಾಪಕರು(ವಾ) ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು. ರವರ ಅವಗಹನೆಗಾಗಿ ಸಲ್ಲಿಸಲಾಗಿದೆ
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯ ನಿರ್ವಾಹಕ ಸಹಾಯಕರು, ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು. ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಅಧೀಕ್ಷಕ ಇಂಜಿನಿಯರ್(ವಿ),ಸೆಸ್ಕ್ ಕಾ ಮತ್ತು ಪಾ ವೃತ್ತ, ಕೊಡಗು- ಚಾಮರಾಜನಗರ ಮೈಸೂರು. ರವರ ಅವಗಹನೆಗಾಗಿ ಸಲ್ಲಿಸಲಾಗಿದೆ
5. ನಿರ್ದೇಶಕರು(ತಾ) ರವರ ತಾಂತ್ರಿಕ ಸಹಾಯಕರು, ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು.
6. ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ),ಕಾರ್ಯ ಮತ್ತು ಪಾಲನೆ ಉಪವಿಭಾಗ, ಚಾ.ವಿ.ಸ.ನಿ.ನಿ, ಕುಶಾಲನಗರ.
7. ಕಚೇರಿ ಪ್ರತಿ.